# ಕರ್ನಾಟಕ ಸರ್ಕಾರ

ಸಂಖ್ಯೆ: ಮಮಇ 79ಮಭಾಬ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 29.03.2021

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.
ಬೆಂಗಳೂರು.

Circulate to all the Stakeholders

3.4.21

P.D.

ಇವರಿಗೆ:
ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.

ಮಾನ್ಯರೇ,

ವಿಷಯ: ರಾಜ್ಯದಲ್ಲಿ ಕೋವಿಡ್-19 ಸಂಕ್ರಾಮಿಕ ರೋಗವನ್ನು ತಡೆಗಟ್ಟುವಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಪ್ತಸಮಾಲೋಚಕರು, ಆಯಾಗಳು, ಅಡುಗೆಯವರು, ಗೃಹಪಾಲಕರು/ಪಾಲಕಿಯರು, ರಕ್ಷಕರು, ಸೇವಕರುಗಳಿಗೆ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿ ಸೇರ್ಪಡೆಗೊಳಿಸುವ ಬಗ್ಗೆ.

ಉಲ್ಲೇಖ:
1. ನಿಮ್ಮ ಏಕ ಕಡತ ಪ್ರಸ್ತಾನೆ ಸಂಖ್ಯೆ: ಕರಾಸಮರಸೋ/ಆಡಳಿತ/11/ಕೋವಿಡ್-19/2020-21 ದಿನಾಂಕ: 23.04.2020.
2. ತಮ್ಮ ಪತ್ರ ಸಂಖ್ಯೆ:ನಿಸಮರಯೋ/ಆಡಳಿತ/ಕೋವಿಡ್-19/2020-21,ದಿನಾಂಕ:08.12.2020

Karnataka State Integrated Child Protection Society ★ Bengaluru 1/4/21

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) & (2)ರ ಪತ್ರಗಳ ಕಡೆ ಗಮನ ಸಳೆಯಲಾಗಿ, ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡೆ ಕೋವಿಡ್-19 ರಡಿ ಮೃತಪಟ್ಟಲ್ಲಿ ವಿಮಾ ಸೌಲಭ್ಯಗಳನ್ನು ಒದಗಿಸುವ ಯೋಜನೆಯನ್ನು ಕೇಂದ್ರ ಸರ್ಕಾರವು ಘೋಷಿಸಿದೆ.

ಐ.ಸಿ.ಪಿ.ಎಸ್ ನ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳ ಸುರಕ್ಷತೆ ಮತ್ತು ಆರೋಗ್ಯದ ಬಗ್ಗೆ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಯವರು, ಆಯಾಗಳು, ಸಮಾಜ ಕಾರ್ಯಕರ್ತರು, ನರ್ಸ್ (ಶುಶ್ರೂಷಕರು) ಮತ್ತು ಚೌಕಿದಾರರುಗಳು, ಇವರುಗಳಿಗೆ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿ ಕೇಂದ್ರ ಸರ್ಕಾರದ ಮಾರ್ಗಸೂಚಿಯ ಫಾರಂ 01 ರಡಿಯಲ್ಲಿ ವಿಮಾ ಯೋಜನೆ ಅನ್ವಯವಾಗಲಿದ್ದು, ರೂ.50.00 ಲಕ್ಷಗಳ ವಿಮಾ ಮೊತ್ತವನ್ನು ಕೇಂದ್ರ ಸರ್ಕಾರದಿಂದ ಕ್ಲೈಮ್ ಮಾಡಬಹುದಾಗಿರುತ್ತದೆ.

ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿ ವಿಮಾ ಸೌಲಭ್ಯ ಅನ್ವಯಿಸುವ ವರ್ಗಗಳಿಗೆ (ರಾಜ್ಯ ಸರ್ಕಾರಿ ನೌಕರರು, ಗ್ರಾಮ ಸಹಾಯಕರು, ಬಿ.ಎಂ.ಟಿ.ಸಿ. ಮತ್ತು ಕೆ.ಎಸ್.ಆರ್.ಟಿ.ಸಿ ನೌಕರರಿಗೆ) ಮಾತ್ರ ರೂ.30.00 ಲಕ್ಷಗಳ ಪರಿಹಾರ ಧನ ಒದಗಿಸಲು ಸಹಮತಿ ನೀಡಿ ಆದೇಶ ಹೊರಡಿಸಿದೆ.

ಈ ಹಿನ್ನೆಲೆಯಲ್ಲಿ ಐ.ಸಿ.ಪಿ.ಎಸ್ ನ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಪ್ತಸಮಾಲೋಚಕರು, ಆಯಾಗಳು, ಅಡುಗೆಯವರು, ಗೃಪಾಲಕರು/ ಪಾಲಕಿಯರು, ರಕ್ಷಕರು ಸೇವಕರುಗಳಿಗೆ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿಯ ವಿಮಾ ಸೌಲಭ್ಯದಡಿ ಪರಿಹಾರ ಪಡೆಯುವ ತಮ್ಮ ಹಂತದಲ್ಲಿಯೇ ಪರಿಶೀಲಿಸಿ ಹಾಗೂ ಈ ಬಗ್ಗೆ **SAST**ಗೆ ಸಂಪರ್ಕಿಸಿ ಮುಂದಿನ ಅಗತ್ಯ ಕ್ರಮ ಕೈಗೊಳುವಂತೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ವಿ.ಭಾಗ್ಯಲಕ್ಷ್ಮಿ 29/3/21

(ವಿ. ಭಾಗ್ಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ
ನಾಗರೀಕರ
ಸಬಲೀಕರಣ ಇಲಾಖೆ.